ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಬುಧವಾರ, ದಿನಾಂಕ: 17ನೇ ಜುಲೈ, 2019

ರಾಜ್ಯದಲ್ಲಿ ಚೈಲ್ಡ್‌ಲೈನ್ 1098 ಸೇವೆಯು ಜಾರಿಯಲ್ಲಿರುವ ಕುರಿತು

ಶ್ರೀಕವಟಗಿಮಠಮಹಾಂತೇಶಮಲ್ಲಿಕಾರ್ಜುನ(ಸ್ಥಳೀಯಸಂಸ್ಥೆಗಳಕ್ಷೇತ್ರ):-

221 (179) ಮಾನ್ಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಚೈಲ್ಡ್‌ಲೈನ್ 1098 ಸೇವೆ ಜಾರಿಯಲ್ಲಿದೆ; (ವಿವರ ನೀಡುವುದು)

(ಆ) ಇದನ್ನು ಎಲ್ಲಾ ಜಿಲ್ಲೆಗಳಲ್ಲಿ ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ಎಲ್ಲಾ ಜಿಲ್ಲೆಗಳಲ್ಲೂ ಚೈಲ್ಡ್‌ಲೈನ್ ಜಿಲ್ಲಾ ಸಲಹಾ ಮಂಡಳಿ ಅಸ್ತಿತ್ವದಲ್ಲಿದೆಯೇ; ಇದ್ದಲ್ಲಿ ಅವುಗಳ ಕಾರ್ಯಗಳೇನು; (ವಿವರ ನೀಡುವುದು)

(ಈ) ಚೈಲ್ಡ್‌ಲೈನ್ 1098 ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಾರ್ಯಕ್ಕೂ ಇರುವ ಸಂಬಂಧಗಳೇನು? (ವಿವರ ನೀಡುವುದು)